ಚೌಕಟ್ಟುಗಳಲ್ಲಿ ಹೆಣ್ಣಿನ ಚಿತ್ರಗಳು ಬದಲಾಗುತ್ತವೆ ಎಂದು ತಿಳಿದಿದ್ದ ಘಟ್ಟವೊಂದಿತ್ತು. ನಿಧಾನವಾಗಿ ಅದರಿಂದ ಹೊರಬರಲಾಯಿತು. ನವೋದಯದ ಆರ್ಷೇಯ ಹೆಣ್ಣಿನ ಚಿತ್ರ, ನವ್ಯರ 'ಹೊಸ ಹೆಣ್ಣಿನ' ಚಿತ್ರ, ಇವೂ ಕೂಡ ಕಣ್ಕಟ್ಟುಗಳೇ ಎನ್ನುವುದರ ಅರಿವಿನ ಹಿನ್ನೆಲೆಯಲ್ಲಿ, ನವೋದಯದ ಕವಿಗಳೇ ಹೆಣ್ಣನ್ನು 'ಆಕರ್ಷಕ ವಸ್ತು'ವಿನ ಮಿತಿಯಿಂದಾಚೆಗೆ ನೋಡುವಲ್ಲಿ ಸ್ವಲ್ಪ ಮಟ್ಟನ ಯಶಸ್ಸನ್ನಾದರೂ ಪಡೆದಿದ್ದಾರೆ ಅನಿಸುತ್ತದೆ. ಹಾಗೆ ನೋಡಿದರೆ ಹೆಣ್ಣನ್ನು ಕುರಿತ ಎರಡು ನಿರ್ಣಾಯಕವಾದ ವಿಧಗಳು 'ದೇವಿ' ಮತ್ತು 'ದೆವ್ವ'ದ ಮಿಥ್‌ಗಳಿಗೆ ಪಕ್ಕಾಗಿರುವ ಕವಿತೆಗಳು ಇಲ್ಲಿ ಕಡಿಮೆ ಎಂದೇ ಹೇಳಬೇಕು. ಈ ಎರಡಕ್ಕಿಂತ ಮುಖ್ಯವಾದ ಮಾದರಿ ಎಂದರೆ, 'ತಾಯಿ' ಮಾದರಿಯದು. 'ತಾಯಿ' ಆರಾಧನೆಯಂತೂ ಎಷ್ಟೋ ಬಾರಿ ಗಂಡಿನ ತಪ್ಪೊಪ್ಪಿಗೆಯಂತೆಯೂ ಭಾಸವಾಗುತ್ತದೆ. ಹೆಣ್ಣನ್ನು ಕುರಿತು ಮಾಡಿರುವ ಅನಂತ ಅಪರಾಧಗಳಿಗೆ ಪಶ್ಚಾತ್ತಾಪವೋ ಎನ್ನುವಂತೆ 'ತಾಯಿ ದೇವಿ'ಯನ್ನು ಹಂಬಲಿಸಿ, ಹಾಡಲಾಗುತ್ತದೆ. ಹೆಣ್ಣು ತನ್ನ ತಾಯಿಯನ್ನು ಕುರಿತು ಬರೆಯುವುದು ಇದಕ್ಕೆ ವಿರುದ್ಧವಾಗಿರುವುದೇ ಸಾಮಾನ್ಯ. ತಾಯಿ ಹೆಣ್ಣಿಗೆ ಸದಾ ಆತ್ಮವಿಶ್ವಾಸದ ಶಕ್ತಿ ಮೂಲವೇ ಆಗಿರುತ್ತಾಳೆ. ಬದುಕಿನ ಕಷ್ಟಗಳನ್ನು, ಬಿಕ್ಕಟ್ಟುಗಳನ್ನು ಎದುರಿಸುವಾಗ ತಾಯಂದಿರು 'ಬಲಿಪಶು'ವಿನ ಹಾಗೆ ಕಾಣಿಸದೇ, ಧೀರೋದಾತ್ತವಾಗಿ ಬದುಕನ್ನು ಎದುರಿಸಿ ಗೆದ್ದವರಂತೆ ಕಾಣಿಸುವುದೇ ಹೆಚ್ಚು. ಬದುಕು ಹೆದರಿಸಿದಾಗಲೆಲ್ಲ, ಅಮ್ಮನನ್ನು ನೆನೆದರೆ ಸಾಕು, ಆ ಹೆದರಿಕೆ ಮಾಯವಾಗಿ ಅದರ ಜಾಗದಲ್ಲಿ ಜೀವನೋತ್ಸಾಹ, ಛಲ, ಸಂಯಮ ಬರತೊಡಗುತ್ತವೆ.

ಹೆಣ್ಣನ್ನು ಕುರಿತ ಹೆಣ್ಣಿನ ಕವಿತೆಗಳ ಇನ್ನೊಂದು ಮುಖ್ಯ ಚಿತ್ರಣವೆಂದರೆ, ವೇಷ ಕಳಚುವ ಹಂಬಲ. ಹೇರಿಕೆಯ, ತೋರಿಕೆಯ ವ್ಯಕ್ತಿತ್ವದ ಪೊರೆ ಕಳಚುತ್ತಾ ತನ್ನನ್ನು ತಾನೇ ಹೊಚ್ಚ ಹೊಸದಾಗಿ ಎಂಬಂತೆ ಕಾಣುತ್ತಾ, ಬೆರಗು-ಸಂತೋಷವನ್ನು, ತುಸು ಆತಂಕ-ಗಲಿಬಿಲಿಯನ್ನು ವ್ಯಕ್ತಪಡಿಸುವ ಕವಿತೆಗಳು, ಈ ಕಾರಣಕ್ಕಾಗಿಯೇ ಹೆಣ್ಣಿಗೆ ಕವಿತೆಯೊಂದನ್ನು ಕಲಾಭಿವ್ಯಕ್ತಿ, ಬುದ್ಧಿಭಾವಗಳ ವಿದ್ಯುದಾಲಿಂಗನ ಮಾತ್ರವಾಗದೆ, ಅದಕ್ಕೆ ಮೀರಿದ ಅಂತರಂಗದ ನೆಲೆಯನ್ನು ಪಡೆದುಕೊಳ್ಳುತ್ತವೆ. ಸ್ವಗತದಂತೆ ಕಾಣುತ್ತಲೇ ಅವು ಲೋಕದೊಂದಿಗೆ ಏಕಾಂತದಲ್ಲಿ ಮಾತನಾಡಲು ಹವಣಿಸುವಂತೆ ಕಾಣಿಸುತ್ತವೆ. ಲೋಕದ ಕಣ್ಣಿಗೆ ತಾನು ಕಾಣಿಸುತ್ತಿರುವ ರೀತಿಗೂ, ತನ್ನನ್ನು ತಾನೇ ನೋಡಿಕೊಂಡಾಗ ಕಾಣಿಸುವ ರೀತಿಗೂ ಇರುವ ವ್ಯತ್ಯಾಸ ಸ್ವತಃ ಅವಳಿಗೆ ಆಶ್ಚರ್ಯ ಹುಟ್ಟಿಸುತ್ತದೆ. 'ಹೆಣ್ಣೆಂಬ ಶಬುದ' ತನಗೆ ಭಿನ್ನವಾಗಿ ಕೇಳಿಸುವ, ಕಾಣಿಸುವ ವಿಲಕ್ಷಣವಾದ, ಅನಾವರಣದ ಪ್ರಕ್ರಿಯೆ ಇದು.

ಹಾಗೆಯೇ ಡಿವಿಜಿಯವರ ಕವಿತೆಯೂ ಸಾಂಪ್ರದಾಯಿಕ ಹೆಣ್ಣಿನ ಚಿತ್ರವನ್ನು ಪಕ್ಕಕ್ಕಿಟ್ಟು, ದೇಹದ ಜಾಗದಲ್ಲಿ 'ವ್ಯಕ್ತಿತ್ವ'ವನ್ನು ಇಡಲು ಪ್ರಯತ್ನಿಸುತ್ತದೆ.

ರವಿಯ ತಾಪದಿ ಜೀವ  
ತಮಿಸುತಿರೆ ಬೇಕಿಹುದು  
ಕಣ್ಣಿರಿದ ಝಳವಲ್ಲ  
ತಣ್ಣನೆಯ ನೆರಳು

ಕವಿತೆಯುದ್ದಕ್ಕೂ ದೇಹ ಚೆಲುವನ್ನು ಮನೋ ಚೆಲುವಿನಿಂದ ಪರ್ಯಾಯಗೊಳಿಸುವ ಸಂದರ್ಭದಲ್ಲಿ ಎಲ್ಲಿಯೂ ಡಿವಿಜಿಯವರಿಗೆ ಅವಳ 'ತನ್ನತನದ ಪನ್ನತಿಕೆ'ಯ ಪ್ರಶ್ನೆ ಮಾತ್ರ ಎದುರಾಗುವುದೇ ಇಲ್ಲ. ಇದನ್ನು ಆರೋಪವೆಂದು ತಿಳಿಯಬೇಕಿಲ್ಲ. 'ಶ್ರೀರಾಮ ಪರೀಕ್ಷಣಂ' ಕೃತಿಯಲ್ಲಿ, ಸೀತೆ ರಾಮನನ್ನು ಕಟುವಾದ ಕೋರ್ಟ್ ಮಾರ್ಷಲ್‌ಗೆ ಒಳಗು ಮಾಡುವ ಸನ್ನಿವೇಶ ನೆನಪಾದದ್ದರಿಂದ ಈ ಮಾತನ್ನು ಹೇಳಬೇಕಾಯಿತು. ಮಾಸ್ತಿಯವರ 'ಚಿಕ್ಕ ಮಲ್ಲಮ್ಮ'ನಂತೂ ನಮ್ಮಲ್ಲಿ ತೀವ್ರ ವಿಷಾದ ಹುಟ್ಟಿಸುತ್ತದೆ. ಎಷ್ಟು ಸಾವಿರ, ಲಕ್ಷ ಹೆಣ್ಣುಮಕ್ಕಳನ್ನು 'ಭಂಡರು ರತ್ನವ ಕೆಡಿಸಿದರಣ್ಣಾ' ಎನ್ನುವುದನ್ನು ಹೇಳಿಯೂ, ಮತ್ತೂ ಮತ್ತೂ ಅದನ್ನೇ ಮುಂದುವರಿಸುತ್ತಾರೆ. ಇಲ್ಲಿ ಗಂಡು ಕೇಡಿ ಹೌದೇ ಹೌದು, ಆದರೆ ಹೆಣ್ಣು 'ಕೆಟ್ಟಳು' ಎನ್ನುವುದಕ್ಕೆ ಏನರ್ಥ? ಇಷ್ಟು ಸಾಲದೆನ್ನುವಂತೆ,

ಕೊಕ್ಕರೆ ನೀರನು ಹೋಗುವಂದದಲಿ  
ಹೊಲ್ಕಳು ಬೆಂಕಿಯ ಹೊಕ್ಕರಣೆಯನು